ಸಭೆಯ ಮುಂದಿಡಲ್ಪಟ್ಟ ಕಾಗದ ಪತ್ರಗಳು

ಶ್ರೀ ರಾಮಕೃಷ್ಣ ಹೆಗ್ಗಡೆ.—೧೯೬೪ನೇ ಇಸವಿಯ ಕರ್ನಾಟಕ ಚಲನಚಿತ್ರಗಳ (ನಿಯಂತ್ರಣ) ಶಾಸನದ ೨೨ನೇ ಕಲಮಿನ ಮೇರೆಗೆ ರಾಯಚೂರಿನ ಪೋಲೀಸ್ ಕೇಂದ್ರದ ಬಯಲು ಪ್ರದೇಶದ ರಂಗಮಂದಿರದಲ್ಲಿ ಪೋಲೀಸ್ ಸೂಪರಿಂಟೆಂಡೆಂಟರವರು ೩೫ ಎಂ. ಎಂ. ನ ಡೊಡ್ಡದಾದ ಚಲನಚಿತ್ರ ಪ್ರದರ್ಶನದ ವಿನಾಯಿತಿಯ ಮಂಜೂರಾತಿಗೆ ಸಂಬಂಧಿಸಿದ ಮಾರ್ಚ್ ೧೦, ೧೯೬೫ನೇ ದಿನಾಂಕದ ಎಚ್. ಡಿ. ೪೭ ಸಿಎನ್ ಎ ೬೫ನೇ ಕ್ರಮಾಂಕದ ಆದೇಶವನ್ನು ಸಭೆಯ ಮುಂದಿಡುತ್ತೇನೆ.

ಉಪಾಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಗಿದೆ.

ನಿಯಮ ೩೫೪ರ ಮೇರೆಗೆ

ಬೆಂಗಳೂರು ಲಾಲ್‌ಬಾಗಿನಲ್ಲಿ ಒಬ್ಬ ಹುಡುಗಿಯ ಮೇಲೆ ಅತ್ಯಾಚಾರ ಮಾಡಿದ ಬಗ್ಗೆ.—

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ನಿಯಮಾವಳಿ ಪ್ರಕಾರ ಚರ್ಚೆಗೆ ಎತ್ತಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟದ್ದಕ್ಕಾಗಿ ತಮ್ಮನ್ನು ಪ್ರಥಮತಃ ಅಭಿನಂದಿಸುತ್ತೇನೆ. ವಿಷಯ ಪ್ರಾಮುಖ್ಯವಾದುದು ಎನ್ನುವುದನ್ನು ಮನಗಂಡು ತಾವು ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಈ ಘಟನೆಗೆ ಸಂಬಂಧಪಟ್ಟ ಹಾಗೆ ನಮಗೆ ಗೊತ್ತಿರತಕ್ಕ ವಿವರಗಳು ಪತ್ರಿಕೆಯಲ್ಲಿ ಬಂದಿರತಕ್ಕ ವಿವರಗಳು ಮತ್ತು ಪತ್ರಿಕೆಯಲ್ಲಿ ಬಾರದೇ ಇರತಕ್ಕ ವಿವರಗಳನ್ನು ಕೆಲವೊಮ್ಮೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ತಾರೀಖು ೧೧-೩-೧೯೬೫ರ ಶುಕ್ರವಾರದ ದಿವಸ ಮಧ್ಯಾಹ್ನ ಒಂದು ಅಥವಾ ಒಂದು ಮೂವತ್ತು ಗಂಟೆ ಸಮಯದಲ್ಲಿ ಇಬ್ಬರು ಹೆಣ್ಣುಮಕ್ಕಳು ಕುಮಾರಿ ಸುಧಾ ಸುಮಾರು ೨೦ ವರ್ಷ, ಮತ್ತೊಬ್ಬರು ಹೆಚ್ಚು ಕಡಿಮೆ ಅದೇ ವಯಸ್ಸಿನವರು ಕುಮಾರಿ ಜೋಷಿಬಿನ್ ಎನ್ನತಕ್ಕವರು. ಅವರು ಯಾವ ಕಾರ್ಯಾನೆಯಲ್ಲಿ ಕೆಲಸ ಮಾಡುತ್ತಿದ್ದರೋ, ಆ ಕಾರ್ಯಾನೆಯಿಂದ ಕೆಲಸವನ್ನು ಮುಗಿಸಿಕೊಂಡು ಕೆಂಗಲ್ ಹನುಮಂತಯ್ಯ ಜೋಡಿ ರಸ್ತೆಯಲ್ಲಿ ಮನೆಗೆ ಹೊರಟು ಬಸ್ಸಿಗಾಗಿ ಕಾಯುತ್ತಿರುವಂಥ ಸಂದರ್ಭದಲ್ಲಿ ನಡೆದಿರತಕ್ಕಂಥ ಘಟನೆ ಇದು. ಆ ಸಂದರ್ಭದಲ್ಲಿ ಸುಮಾರು ಮೂರು ಜನ, ಅವರ ಹೆಸರುಗಳು ಕೂಡ ಕೆಲವು ಪತ್ರಿಕೆಗಳಲ್ಲಿ ಬಂದಿವೆ, ಶ್ರೀಧರ ಎನ್ನುವ ಒಬ್ಬರು, ಮತ್ತೆ ಇಬ್ಬರ ಫೋಟೋಗಳು ಬಂದಿವೆ. ಆ ಇಬ್ಬರು ಸಿಕ್ಕಿದ್ದಾರೆ, ಇನ್ನೊಬ್ಬರು ಕೈಗೆ ಸಿಕ್ಕಿಲ್ಲವೆಂದು ಸುದ್ದಿ ಬಂದಿದೆ. ಒಟ್ಟು ಮೂರು ಜನ ತಮ್ಮ ಕೈಯಲ್ಲಿ ಪಾಜ್ಜನ್ನು ಹಿಡಿದು, ಹೆಣ್ಣುಮಕ್ಕಳನ್ನು ಹೆದರಿಸಿ, ಇಬ್ಬರನ್ನೂ ಒಂದೇ ಆಟೋರಿಕ್ಷಾದಲ್ಲಿ, ಬಲತ್ಕಾರವಾಗಿ ಕೂರಿಸಿಕೊಂಡು ಕರೆದುಕೊಂಡು ಹೋಗುತ್ತಿರುವ ಸಂದರ್ಭದಲ್ಲಿ ಕುಮಾರಿ ಜೋಷಿಬಿನ್ ಎನ್ನುವವರು ತಪ್ಪಿಸಿಕೊಂಡಿದ್ದಾರೆ. ಈಕೆ ತಪ್ಪಿಸಿಕೊಂಡರೂ ಸ್ವಲ್ಪದೂರ ಬೆನ್ನು ಹತ್ತಿದ್ದಾರೆ. ಆದರೂ ತಪ್ಪಿಸಿಕೊಂಡು ಹೋದ ಆಕೆ ಯಶಸ್ವಿಯಾಗಿದ್ದಾರೆ. ಒಟ್ಟಿನಲ್ಲಿ ಆ ಹೆಣ್ಣುಮಗಳ ಮರ್ಯಾದೆ ಉಳಿಯಿತು ಅದೇ ಸಂತೋಷ. ಅಧ್ಯಕ್ಷರೇ, ಕುಮಾರಿ ಸುಧಾ ಇಲ್ಲಿ ಅವರ ಕೈಗೆ ಸಿಕ್ಕಿ ಬಲಿಪಶುವಾಗಿದ್ದಾಳೆ. ಆಕೆ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಹನುಮಂತಯ್ಯ ಜೋಡಿ ರಸ್ತೆಯಲ್ಲಿ ಸಾವಿರಾರು ಜನ ಯಾವಾಗಲೂ ಓಡಾಡುತ್ತಿರುತ್ತಾರೆ. ಆ ರಸ್ತೆಯಲ್ಲಿ ಯಾವಾಗಲೂ ವಾಹನಗಳು ಓಡಾಡುತ್ತಿರುತ್ತವೆ. ರಸ್ತೆಯ ಪಜುಬಾಜಿನಲ್ಲಿ ಅಂಗಡಿಗಳು ಇದ್ದು, ಸಣ್ಣಪುಟ್ಟ ಕಾರ್ಯಾನೆಗಳು ಇವೆ. ಒಬ್ಬ ವ್ಯಕ್ತಿ ಹತ್ತಿರ ಮಚ್ಚು ಇದ್ದ ಸಂದರ್ಭದಲ್ಲಿ ಸಹಜವಾಗಿಯೇ ಜನಗಳಿಗೆ ಭಯಬರುತ್ತದೆ. ಆದರೆ ಒಬ್ಬ ವ್ಯಕ್ತಿ ಎಷ್ಟು ಜನರನ್ನ ನಿಭಾಯಿಸುತ್ತಿದ್ದ. ಹಳ್ಳಿಗಾಡಿನಲ್ಲಿ ಇಂಥ ಒಂದು ಕೃತ್ಯ ನಡೆದಿದ್ದರೆ, ಎಲ್ಲಾ ಜನರು ಮುತ್ತಿಕೊಂಡು ಬಲಿ ಹಾಕುತ್ತಿದ್ದರು. ಇವತ್ತು ಮತ್ತೊಂದು ಪ್ರಕರಣವೂ ಕೂಡ ಪತ್ರಿಕೆಯಲ್ಲಿ ಬಂದಿದೆ ಅಂದರೆ, ಪಟ್ಟಣದಲ್ಲಿರತಕ್ಕ ಜನತೆಗೆ ಧೈರ್ಯ ಇಲ್ಲ ಎನ್ನುವ ದೃಷ್ಟಿಯಿಂದ ಹೇಳುತ್ತಿಲ್ಲ. ಆಲ್ಲಿದ್ದಂಥ ಜನತೆ ಧೈರ್ಯ ಮಾಡಿದ್ದರೆ, ಹೆಣ್ಣು ಮಕ್ಕಳ ಮಾನಭಂಗವಾಗುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತಿತ್ತು ಎನ್ನುವುದು ನನ್ನ ಅನಿಸಿಕೆ. ಆ ಪ್ರಯತ್ನವನ್ನು ಅಲ್ಲಿರತಕ್ಕ ಸಾರ್ವಜನಿಕರು ಯಾರೂ ಕೂಡ ಮಾಡಲಿಲ್ಲ ಎನ್ನುವಂಥ ಅಂಶ ಮನಸ್ಸಿಗೆ ತುಂಬಾ ನೋವನ್ನು ತರುವುದು ಅಷ್ಟೇ ಅಲ್ಲ, ಮುಂದಿನ ಭವಿಷ್ಯದಲ್ಲಿ ಏನಾಗುತ್ತದೆ ಎನ್ನುವ ಬಗ್ಗೆ ಉತ್ತರ ಹುಡುಕಬೇಕಾಗುತ್ತದೆ. ಆಲ್ಲಿದ್ದಂಥ ಸಾರ್ವಜನಿಕರಲ್ಲಿ ಕೊನೇ ಪಕ್ಷ ೫-೬ ಜನವಾದರೂ ಪ್ರಾಮಾಣಿಕ